ಸಂಕೇತ ಸಂಖ್ಯೆ : **62-K** ವಿಷಯ : ತೃತೀಯ ಭಾಷೆ — ಕನ್ನಡ

**Code No. : 62-K Subject : Third Language — KANNADA**

**( ಹೊಸ ಪಠ್ಯಕ್ರಮ / New Syllabus )**

**( ಖಾಸಗಿ ಅಭ್ಯರ್ಥಿ / Private Fresh )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ, ಪದ್ಯ ಮತ್ತು ಪೋಷಕ ಅಧ್ಯಯನಗಳ 71 ಅಂಕಗಳ ಒಟ್ಟಾರೆ 38 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ಆನ್ವಯಿಕ ವ್ಯಾಕರಣ, ಅಲಂಕಾರ ಮತ್ತು ಛಂದಸ್ಸುಗಳ 12 ಅಂಕಗಳ ಒಟ್ಟಾರೆ 12 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 17 ಅಂಕಗಳ ಒಟ್ಟಾರೆ 4 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತಿ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡ್ಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

CAREERINDIA



## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರಿಸಿ : 16 × 1 = 16

1. ಗೊರೂರು ರಾಮಸ್ವಾಮಿ ಅಯ್ಯಂಗಾರರ ಜೇಬಿನಲ್ಲಿ ಏನೇನಿತ್ತು ?

2. ಅನಿಲ್ ಕುಂಬ್ಳೆಯವರು ಕ್ರಿಕೆಟ್ ಕಲಿತ ಸಂಸ್ಥೆ ಯಾವುದು ?

3. ಕೋಗಿಲೆಯ ಗಾನ ಕೇಳಿ ಮೂಕವಾದದ್ದು ಏನೆಂದು ಕವಿ ಚೆನ್ನವೀರ ಕಣವಿ ಹೇಳಿದ್ದಾರೆ ?

4. ಗೊರೂರರಿಗೆ ಪೊಲೀಸರ ಮನೆಯಲ್ಲಿ ರಾತ್ರಿ ದೊರೆತ ಊಟವೇನು ?

5. ಅನಿಲ್ ಕುಂಬ್ಳೆಯವರು ಭಾರತೀಯ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದದ್ದು ಯಾವಾಗ ?

6. ಸನ್ಯಾಸಿ ವೇಷಧರಿಸಿದ ಸರದಾರನ ಹೆಸರೇನು ?

7. ಯಾರು ಯಾರು ಒಂದೇ ಎಂದು ನಿಸಾರ್ ಅಹಮ್ಮದ್‌ರವರು ಹೇಳಿದ್ದಾರೆ ?

8. "ಸರ್ವಶಕ್ತದೂತ" ಯಾವಾಗ ಅವತರಿಸುವನು ಎಂದು ಬಿ.ಆರ್. ಲಕ್ಷ್ಮಣರಾವ್‌ರವರು ಹೇಳಿದ್ದಾರೆ ?

9. ಬಿಸಿಲ ಸೀಮೆಯ ಜನರ ಸ್ವಭಾವ ಎಂತಹುದು ?

10. ಪುಲಿಗೆರೆ ಸೋಮನಾಥರ ಪ್ರಕಾರ ಯಾರು ತಕ್ಕ ಮಗನಲ್ಲ ?

11. ತನ್ನ ಕಾಲದ ಕನ್ನಡ ರಾಜ್ಯವನ್ನು ವರ್ಣಿಸಿದ ದೊರೆ ಯಾರು ?

12. ರಾಮಸಿಂಗ್ ಯಾರು ?

13. ಅಂಬಿಗರ ಚೌಡಯ್ಯರು ಬಡತನಕ್ಕೆ ಯಾವ ಚಿಂತೆ ಎಂದಿದ್ದಾರೆ ?

14. ನಾವು ದಿನದಿನವೂ ಮಾಡಬೇಕಾದ ಕೆಲಸವೇನೆಂದು ಪುರಂದರ ದಾಸರು ಹೇಳಿದ್ದಾರೆ ?

www.careerindia.com

CAREERINDIA



15. 'ಹೀಗೊಂದು ಟಾಪ್ ಪ್ರಯಾಣ' – ಲಲಿತ ಪ್ರಬಂಧದ ಲೇಖಕರಾರು ?

16. ಏಕದಿನ ಪಂದ್ಯ ಎಂದರೇನು ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು** ಅಥವಾ **ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $13 \times 2 = 26$

17. ಗೊರೂರು ರಾಮಸ್ವಾಮಿ ಅಯ್ಯಂಗಾರರು ದೀಪ ಹೋತ್ತಿದ ಮೇಲೆ ನಗರದಲ್ಲಿ ಏನೇನನ್ನು ನೋಡಿದರು ?

18. ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯಲ್ಲಿ ಕುಂಬ್ಳೆಯವರ ಪಾತ್ರವೇನು ?

19. ಕನ್ನಡ ಭಾಷೆಯ ಒಳಸತ್ವವನ್ನು ಚಿಮ್ಮಿಸಿದವರು ಯಾರು ಯಾರು ?

20. ರಾಮಸಿಂಗ್‌ನ ಕುಟುಂಬಕ್ಕೂ, ಸ್ವಾತಂತ್ರ್ಯ ಸಂಗ್ರಾಮಕ್ಕೂ ಏನು ಸಂಬಂಧವಿತ್ತು ?

21. ಆಶುನಾಟಕವೆಂದರೇನು ? ಉದಾಹರಣೆ ಕೊಡಿ.

22. ವ್ಯಕ್ತಿಗೆ ಸಾಧನೆಯಲ್ಲಿ ಸಿದ್ಧಿ ದೊರೆಯಲು ಯಾರಲ್ಲಿ ದೃಷ್ಟಿಕೇಂದ್ರೀಕರಿಸಬೇಕೆಂದು ಪುರಂದರ ದಾಸರು ಹೇಳಿದ್ದಾರೆ ?

23. ರೈತನು ಮಳೆರಾಯನಲ್ಲಿ ಏನು ಬೇಡಿಕೊಳ್ಳುತ್ತಾನೆ ?

24. ಪುರಂದರ ದಾಸರು ಮನಸ್ಸನ್ನು ಶುದ್ಧವಾಗಿಡಲು ಯಾವ ವಿಧಾನ ಹೇಳಿದ್ದಾರೆ ?

25. ರೈತನು ಮೋಡ ಕಂಡಾಗ ಹೇಗೆ ಸಂತೋಷಪಡುತ್ತಾನೆ ?

26. ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆ ಏನು ?

27. ಯಾವ ಯಾವ ಧರ್ಮದುಸಿರು ಒಂದೇ ಎಂದು ಕವಿ ಹೇಳಿದ್ದಾರೆ ?

28. ಪೊಲೀಸಿನವ ಲಾಕಪ್ಪಿನಲ್ಲಿ ಯಾವ ಸೌಲಭ್ಯಗಳಿವೆ ಎಂದು ಹೇಳಿದನು ?

29. ಅಕ್ಷರ ಜ್ಞಾನವು ಹೇಗೆ ನಮಗೆ ಹೊಸ ಜೀವನವನ್ನು ಕೊಡುತ್ತದೆ ?

www.careerindia.com

CAREERINDIA



ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ವಿವರಿಸಿ : 4 × 3 = 12

30. "ಹೆಣ್ಣು ಮಗಳೇ, ಈ ಧ್ವಜವನ್ನು ಮೊದಲು ಕೆಳಗಿಡು."

31. "ಮೌನ ಧ್ಯಾನ ನಿನಗೆ ಊನ ಕುಕಿಲ ಜಾಣ ಕೋಗಿಲೆ"

32. "ತೇಜಸ್ವಿಯಾದವನಿಗೆ ಮಾನಭಂಗಕ್ಕಿಂತ ಮರಣವೇ ಮೇಲು."

33. "ಕೇಡಾದರೆ ಮರಣದ ಚಿಂತೆ"

ಈ ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : 2 × 3 = 6

34. ಬಿ.ಆರ್. ಲಕ್ಷ್ಮಣರಾವ್

35. ಜಿ.ಪಿ. ರಾಜರತ್ನಂ

36. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 3 = 3

ನಾವು ______________________________

______________________________ ಇಂದೆ.

***ಅಥವಾ***

ಕರ್ನಾಟಕ ______________________________

______________________________ ಒಂದೆ.

ಈ ಕೆಳಗಿನ ಪ್ರಶ್ನೆಗಳಿಗೆ **ಎಂಟು** ಅಥವಾ **ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

37. ಬೆಳವಡಿ ಮಲ್ಲಮ್ಮಾಜಿ ಆಘಾತಗೊಳ್ಳಲು ಕಾರಣವೇನು ?

***ಅಥವಾ***

ಬ್ರಿಟಿಷರ ವಿರುದ್ಧ ಸಮರ ಸಾರಿದ ಕಿತ್ತೂರು ಚೆನ್ನಮ್ಮ ವೈರಿಗಳ ಒಳಸಂಚಿಗೆ ಹೇಗೆ ಬಲಿಯಾಳು ?

38. ಅಂಬಿಗರ ಚೌಡಯ್ಯರ ವಚನದ ಸಾರಾಂಶ ವಿವರಿಸಿ.

***ಅಥವಾ***

ಶಿವನ ಚಿಂತೆಯಲ್ಲಿ ಇಲ್ಲದವರು ಮನಸ್ಸಿನಲ್ಲಿ ಉಂಟಾಗುವ ಚಿಂತೆಯನ್ನು ಪಟ್ಟಿ ಮಾಡಿ.



www.careerindia.com

CAREERINDIA



## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $12 \times 1 = 12$

39. ಈ ಕೆಳಗಿನ ಪದಗಳಲ್ಲಿ ಅನ್ಯದೇಶ್ಯಪದವಿದು

(ಎ) ಟ್ರಾಫಿಕ್ (ಬಿ) ರಾತ್ರಿ

(ಸಿ) ವಾಹನ (ಡಿ) ಆಗಸ

40. 'ಕೋಗಿಲೆ ಕಂಠ ಹೇಗಿದೆ ?' ಇಲ್ಲಿ ಬಳಸಿರುವ ಲೇಖನ ಚಿಹ್ನೆ

(ಎ) ಉದ್ಧರಣ (ಬಿ) ಆಶ್ಚರ್ಯಸೂಚಕ

(ಸಿ) ಪ್ರಶ್ನಾರ್ಥಕ (ಡಿ) ಭಾವಸೂಚಕ

41. 'ಢಣ ಢಣ' ಇಲ್ಲಿರುವ ವ್ಯಾಕರಣಾಂಶ

(ಎ) ನುಡಿಗಟ್ಟು (ಬಿ) ಅನುಕರಣಾವ್ಯಯ

(ಸಿ) ದ್ವಿರುಕ್ತಿ (ಡಿ) ಜೋಡುನುಡಿ

42. 'ಇಳೆ' ಪದದ ಸಮಾನಾರ್ಥಕ ಪದ

(ಎ) ಮಳೆ (ಬಿ) ಬೆಳೆ

(ಸಿ) ಭೂಮಿ (ಡಿ) ಮೆಳೆ

www.careerindia.com

CAREERINDIA



43. ದ್ವಿತೀಯ ವಿಭಕ್ತಿ ಪ್ರತ್ಯಯವಿದು

(ಎ) ಉ (ಬಿ) ಅನ್ನು

(ಸಿ) ಅಲ್ಲಿ (ಡಿ) ಇಗೆ

44. 'ಗಾಯಕ' ಪದದ ಅನ್ಯಲಿಂಗ ರೂಪ

(ಎ) ಸಹಾಯಕಿ (ಬಿ) ಗಾಯಕಿ

(ಸಿ) ಗಮಕಿ (ಡಿ) ಗಾರುಡಿ

45. "ಮುಖವು ಚಂದ್ರನಂತೆ ಇದೆ." ಇಲ್ಲಿರುವ ಅಲಂಕಾರ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ಯಮಕಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ

46. 'ಧರ್ಮ' ಪದದ ವಿರುದ್ಧಾರ್ಥಕ ಪದ

(ಎ) ಅಕರ್ಮ (ಬಿ) ಅಧರ್ಮ

(ಸಿ) ಕರ್ಮ (ಡಿ) ಚರ್ಮ

47. 'ಕಲಶ' ಪದದ ತದ್ಭವ ರೂಪ

(ಎ) ಕೈಲಾಸ (ಬಿ) ಕೆಲಸ

(ಸಿ) ಕಳಸ (ಡಿ) ಕಲ್ಮಶ

48. ಕನ್ನಡ ಅಕ್ಷರಮಾಲೆಯ ಒಟ್ಟು ಅಕ್ಷರಗಳು

(ಎ) 40 (ಬಿ) 45

(ಸಿ) 47 (ಡಿ) 49

www.careerindia.com

CAREERINDIA



49. ಸವರ್ಣದೀರ್ಘ ಸಂಧಿಗೆ ಇದು ಉದಾಹರಣೆಯಾಗಿದೆ

(ಎ) ದೀಪಾಲಂಕಾರ (ಬಿ) ಊಟವಾಯಿತು

(ಸಿ) ಅರಿವಿಲ್ಲ (ಡಿ) ದೇವೇಂದ್ರ

50. ಸಜಾತೀಯ ಸಂಯುಕ್ತಾಕ್ಷರವಿದು

(ಎ) ರಾತ್ರಿ (ಬಿ) ಚಂದ್ರ

(ಸಿ) ನಕ್ಷತ್ರ (ಡಿ) ಅಮ್ಮ

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

51. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : $1 \times 3 = 3$

* ಹಾಸಿಗೆ ಇದ್ದಷ್ಟು ಕಾಲುಚಾಚು
* ಕೈ ಕೆಸರಾದರೆ ಬಾಯಿ ಮೊಸರು
* ದೇಶ ಸುತ್ತು ಕೋಶ ಓದು

52. ನಿಮ್ಮನ್ನು ಮಂಗಳೂರು ಜಿಲ್ಲೆ, ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಸರ್ಕಾರಿ ಪ್ರೌಢಶಾಲೆಯ ಕಾರ್ತಿಕ್ / ಕಾವ್ಯ ಎಂದು ಭಾವಿಸಿಕೊಂಡು, ಶಾಲಾ ಸಂಪರ್ಕ ರಸ್ತೆ ಡಾಮರೀಕರಣಗೊಳಿಸಲು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ. $1 \times 5 = 5$

***ಅಥವಾ***

ನೀವು ಮಂಗಳೂರು ಜಿಲ್ಲೆ, ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಸರ್ಕಾರಿ ಪ್ರೌಢಶಾಲೆಯ ಕಾರ್ತಿಕ್ / ಕಾವ್ಯ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯೋತ್ಸವ ಕುರಿತು ಉಡುಪಿ ಜಿಲ್ಲೆಯ ಪೂರ್ಣ ಪ್ರಜ್ಞ ವಿದ್ಯಾಲಯದ ನಿಮ್ಮ ಸ್ನೇಹಿತ ರಾಧೇಶ / ರಮ್ಯಳಿಗೊಂದು ಪತ್ರ ಬರೆಯಿರಿ.

53. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯದಲ್ಲಿ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : $1 \times 5 = 5$

* ಪರಿಸರ ಸಂರಕ್ಷಣೆ
* ಕಂಪ್ಯೂಟರ್
* ರಾಷ್ಟ್ರೀಯ ಭಾವೈಕ್ಯ

www.careerindia.com

CAREERINDIA



54. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನಗಳಿಗೆ ಉತ್ತರ ಬರೆಯಿರಿ : $1 \times 4 = 4$

ಭಾರತದಂತಹ ರಾಷ್ಟ್ರದಲ್ಲಿ ಜಾತೀಯತೆ, ಗ್ರಾಮೀಣ ಜೀವನ, ಬಡತನ ಮತ್ತು ಮೌಢ್ಯಗಳಿಂದಾಗಿ ಮೇಲು–ಕೀಳೆಂಬ ಭಾವನೆ ಬೆಳೆದು ಬಂದಿದೆ. ಈ ಮೇಲು ಕೀಳು ಭಾವನೆ ಹೋಗಲಾಡಿಸಲು ಹೋರಾಟಗಳು ನಡೆಯುತ್ತಿವೆ. ಕರುಣೆ, ಸಮಾನತೆ, ಅಹಿಂಸೆ ಎಂಬ ಮೌಲ್ಯಗಳ ಮೂಲಕ ಎಲ್ಲರಲ್ಲೂ ದೇವರನ್ನು ಕಾಣಬೇಕಾಗಿದೆ. ಅಂತರಂಗದ ಹೊಂದಾಣಿಕೆಯಿಂದ ಮಾತ್ರ ಸಮಾನತೆ ಮತ್ತು ಸಾಮರಸ್ಯ ಸಾಧ್ಯ.

*ಪ್ರಶ್ನೆಗಳು :*

ಅ) ಭಾರತದಲ್ಲಿ ಮೇಲು–ಕೀಳು ಎಂಬ ಭಾವನೆ ಯಾವುದರಿಂದಾಗಿ ಬೆಳೆದಿದೆ ?

ಆ) ಹೋರಾಟಗಳು ಯಾಕಾಗಿ ನಡೆಯುತ್ತಿವೆ ?

ಇ) ಯಾವ ಮೌಲ್ಯಗಳ ಮೂಲಕ ಜನರಲ್ಲಿ ದೇವರನ್ನು ಕಾಣಬೇಕಾಗಿದೆ ?

ಈ) ಅಂತರಂಗದ ಹೊಂದಾಣಿಕೆಯಿಂದ ಯಾವುದನ್ನು ಸಾಧಿಸಬಹುದು ?

www.careerindia.com